| 6 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ ಬೆಂಗಳೂರು ನಗರ. | |
|---|---|
| ಸಿ.ಸಿ. ನಂ. | **8572/2015** |
| ಸಾಕ್ಷಿಯ ಹೆಸರು | ನಂಜೇಗೌಡ ಎಸ್. |
| ತಂದೆ ಹೆಸರು | ಶಿವನಂಜಯ್ಯ |
| ವಯಸ್ಸು | 43 ವರ್ಷ |
| ಉದ್ಯೋಗ | ಪಿಐ, ಪೋಲಿಸ್ ಪ್ರದಾನ ಕಚೇರಿ |
| ವಾಸ ಸ್ಥಳ | ಬೆಂಗಳೂರು |

ಸಾಕ್ಷಿಯನ್ನು ದಿನಾಂಕ **03-02-2024** ರಂದು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.
ಮುಖ್ಯ ವಿಚಾರಣೆ : ಮಾನ್ಯ ಹಿರಿಯ ಸರ್ಕಾರಿ ಸಹಾಯಕ ಅಭಿಯೋಜಕರಿಂದ :

ನಾನು 26.08.2011 ರಿಂದ 10.02.2016 ವರೆಗೆ ನಾನು ಮೈಕೋಲೇಔಟ್ ಠಾಣೆಯಲ್ಲಿ ಪಿಎಸ್ಐಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 26-06-2014 ರಂದು ರಾತ್ರಿ 9.00 ಗಂಟೆಗೆ ನಾನು ಠಾಣಾ ಪ್ರಭಾರದಲ್ಲಿದ್ದಾಗ ಚಾಸಾ-1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿ ಠಾಣಾ ಮೊ.ಸಂಖ್ಯೆ 434/2014 ರಲ್ಲಿ ಪ್ರವವನ್ನು ದಾಖಲು ಮಾಡಿ ಅದನ್ನು ಮಾನ್ಯ ನ್ಯಾಯಾಲಯಕ್ಕೆ ಹಾಗೂ ಮೇಲಾದಿಕಾರಿಗೆ ಸಲ್ಲಿಸಿರುತ್ತೇನೆ. ಪ್ರವವ ನಿಪಿ-3, ಸಾಕ್ಷಿಯ ಸಹಿ ನಿಪಿ-3 ಎ. ದೂರನ್ನು ಈಗಾಗಲೇ ನಿಪಿ-1, ಸಾಕ್ಷಿಯ ಸಹಿ ನಿಪಿ-1 ಬಿ. ಅದೇ ದಿನ ರಾತ್ರಿ 9.15 ಗಂಟೆಗೆ ಚಾಸಾ-8 ರವರು 1 ನೇ ಆರೋಪಿಯನ್ನು ಪತ್ತೆ ಮಾಡಿ ಬಿಟಿಎಂ 2 ನೇ ಹಂತ 16 ನೇ ಮುಖ್ಯ ರಸ್ತೆಯ ಬಳಿಯಿಂದ ತಂದು ಹಾಜರು ಪಡಿಸಿದರು. ಆರೋಪಿಯನ್ನು ದಸ್ತಗಿರಿ ಮಾಡಿ ಅದಕ್ಕೆ ಸಂಬಂಧಟ್ಟಂತೆ ಚಾಸಾ-8 ರವರನ್ನು ವಿಚಾರಣೆ ಮಾಡಿ ಹೇಳಿಯನ್ನು ಪಡೆದಿರುತ್ತೇನೆ. ದಿಃ 27-06-2014 ರಂದು ಚಾಸಾ-1 ರವರು ಕೃತ್ಯ ನಡೆದ ಸ್ಥಳವನ್ನು ತೋರಿಸಿದ್ದು ಬೆಳಿಗ್ಗೆ 10 ರಿಂದ 10.45 ರ ಸಮಯಲ್ಲಿ ಚಾಸಾ-2 ಮತ್ತು 3 ರವರ ಸಮಕ್ಷಮ ಪಂಚನಾಮೆ ಜರುಗಿಸಿರುತ್ತೇನೆ. ಪಂಚನಾಮೆಯನ್ನು ಈಗಾಗಲೇ ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಗಿದೆ. ಅದೇ ದಿನ ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ದಿಃ 29-06-2014 ರಂದು ಚಾಸಾ-1 ರವರ ಮುಂದುವರೆದ ಹೇಳಿಕೆಯನ್ನು ಪಡೆದಿರುತ್ತೇನೆ. ಅದೇ ದಿನ ಚಾಸಾ-4 ರಿಂದ 7 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ದಿಃ 20-09-2014 ರಂದು 2 ರಿಂದ 4 ನೇ ಆರೋಪಿತರು ನ್ಯಾಯಾಲಯಕ್ಕೆ ಹಾಜರಾಗಿ ಶರಣಾಗಿದ್ದು ಅದಕ್ಕೆ ಸಂಬಂಧಪಟ್ಟ ಮೆಮೋ ಅನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿಃ 16-03-2015 ರಂದು ಆರೋಪಿತರ ವಿರುದ್ಧ ಆರೋಪ ಸಾಬೀತಾಗಿದ್ದರಿಂದ ಅವರ ವಿರುದ್ಧ ದೋಷಾರೋಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ನ್ಯಾಯಾಲಯದ ಮುಂದಿರುವ ಆರೋಪಿತರನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು ಆರೋಪಿ ಪರ ವಕೀಲರಿಂದಃ**

ದಿಃ 25-06-2014 ರಂದು ನೀಡಿದ ದೂರಿನಲ್ಲಿ 2 ರಿಂದ 5 ರವರಗಿನ ಆರೋಪಿತರ ಮೇಲೆ ಯಾವುದೇ ರೀತಿಯ ಆರೋಪ ಇರುವುದಿಲ್ಲ ಎಂದು ಸೂಚಿಸಿದಾಗ ಸಾಕ್ಷಿಯು ಸರಿಯಲ್ಲ ನುಡಿದರು. ದೂರಿನ ವಿಷಯದಲ್ಲಿ ಸದರಿ ಆರೋಪಿತರ ಹೆಸರಿದೆ. ದೂರನ್ನು ಓದಿ ನೋಡಿದಾಗ ಅವರ ಮೇಲೆ ಆರೋಪಗಳು ಇದೆ. ಎಫ್ ಐ ಆರ್ ನಂಲ್ಲಿ 2 ರಿಂದ 5 ರವರೆಗಿನ ಆರೋಪಿತರ ಹೆಸರುಗಳನ್ನು ನಮೂದು ಮಾಡಿದ್ದೀರ ಎಂದು ಕೇಳಿದಾಗ ಸಾಕ್ಷಿಯು ಕುಟುಂಬ ಸದಸ್ಯರು ಎಂದು ನಮೂದು ಮಾಡಿದ್ದೇನೆ ಎಂದರು. ದೂರಿನಲ್ಲಿ ಮುಖ್ಯವಾಗಿ ದೂರವಾಣಿ ಸಂಭಾಷಣೆಯ ಬಗ್ಗೆ ಹೇಳಲಾಗಿದೆ ಎಂದು ಸೂಚಿಸಿದಾಗ ಸಾಕ್ಷಿಯು ದೂರವಾಣಿ ಸಂಬಾಷಣೆ ಮತ್ತು ನೇರ ಆರೋಪಗಳು ಸಹ ಇದೆ ಎಂದು ನುಡಿದರು. ತನಿಖೆ ಸಮಯದಲ್ಲಿ ದೂರವಾಣಿ ಮುಖಾಂತರ ಸಂಭಾಷಣೆಯ ಬಗ್ಗೆ ತನಿಖೆ ಮಾಡಿದ್ದೀರ ಎಂದು ಕೇಳಿದಾಗ ಸಾಕ್ಷಿಯು ದೂರವಾಣಿಗೆ ಸಂಬಂಧಪಟ್ಟ ಹಾಗೆ ವಿವರಗಳನ್ನು ಫಿರ್ಯಾದುದಾರರು ತಾನೇ ನ್ಯಾಯಾಲಯದ ಮುಂದೆ ನೀಡುತ್ತೇನೆ ಎಂದು ಮೌಖಿಕವಾಗಿ ನನಗೆ ತಿಳಿಸಿದರು. ಆ ರೀತಿ ನಿಮ್ಮ ದೋಷಾರೋಪಣ ಪತ್ರದಲ್ಲಿ ನೀವು ಹೇಳಿಲ್ಲ ಎಂದು ಸೂಚಿಸಿದಾಗ ಸಾಕ್ಷಿಯು ಹೌದು ಎಂದು ನುಡಿದರು. ನಿಮ್ಮ ತನಿಖೆ ಸಮಯದಲ್ಲಿ ಚಾಸಾ-1 ಮತ್ತು 1 ನೇ ಆರೋಪಿಯ ಫೋನ್ ಕಾಲ್ ಆಗಿರುವ ಬಗ್ಗೆ ನೀವು ವಿಚಾರಣೆ ಮಾಡಿದ್ದೀರ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿದರು.

ಈ ಕೇಸಿಗೆ ಸಂಬಂಧಪಟ್ಟ ಹಾಗೆ ಚಾಸಾ-1 ಮತ್ತು ಆರೋಪಿ ಓದಿದಂತಹ ಕಾಲೇಜಿಗೆ ಅಲ್ಲಿನ ಪ್ರಾಂಶುಪಾಲರು, ಲೆಕ್ಚರರ್, ಸಹಪಾಠಿಯವರನ್ನು ವಿಚಾರಣೆ ಮಾಡಿದ್ದೀರ ಎಂದು ಕೇಳಿದಾಗ ಸಾಕ್ಷಿಯು ಇಲ್ಲ ಎಂದು ನುಡಿದರು. ಚಾಸಾ-1 ರವರು ಒಂದು ರೆಸಿಡೆನ್ಸಿಯಲ್ ಏರಿಯಾ ಆಗಿರುತ್ತದೆ ಎಂದರೆ ಸರಿ. ಅಕ್ಕಪಕ್ಕದ ಮನೆಯವರ ಹತ್ತಿರ ಅದರ ಬಗ್ಗೆ ವಿಚಾರಣೆ

ಮಾಡಿದ್ದೀರ ಎಂದು ಕೇಳಿದಾಗ ಸಾಕ್ಷಿಯು ಅಕ್ಕಪಕ್ಕದವರು ಹೇಳಿಕೆ ಕೊಡಲು ಮುಂದೆ ಬಂದಿರುವುದಿಲ್ಲ ಆದ್ದರಿಂದ ಅವರನ್ನು ಸಾಕ್ಷಿಗಳಾಗಿ ಮಾಡಿಲ್ಲ. ದೋಷಾರೋಪಣಾ ಪತ್ರದಲ್ಲಿ ಆ ರೀತಿ ಅವರು ವಿಚಾರಣೆಗೆ ಅವರು ಮುಂದೆ ಬಂದಿರುವುದಿಲ್ಲ ಎಂದು ನಮೂದು ಮಾಡಿದ್ದೀರಾ ಎಂದು ಕೇಳಿದಾಗ ಸಾಕ್ಷಿಯು ಅದರ ಅವಶ್ಯಕತೆ ಇರುವುದಿಲ್ಲ ಎಂದು ನುಡಿದರು. 2 ರಿಂದ 5 ನೇ ಆರೋಪಿಗಳು ಚಾಸಾ-1 ರವರ ಜೊತೆ ಅವರ ಮನೆ ಹತ್ತಿರ ಹೋಗಿರುವ ಬಗ್ಗೆ ಅಥವಾ ಚಾಸಾ-1 ರವರ ಜೊತೆ ಮಾತನಾಡಿರುವ ಬಗ್ಗೆ ನಿಮ್ಮ ತನಿಖೆಯಲ್ಲಿ ಎಲ್ಲಿಯೂ ತೋರಿಸಿರುವುದಿಲ್ಲ ಎಂದು ಸೂಚಿಸಿದಾಗ ಸಾಕ್ಷಿಯು ದೋಷಾರೋಪಣಾ ಪತ್ರದಲ್ಲಿ ಹೇಳಲಾಗಿದೆ ಎಂದು ನುಡಿದರು. ಪಂಚರಿಗೆ ಯಾವುದೇ ನೋಟಿಸನ್ನು ಜಾರಿ ಮಾಡಿರುವುದಿಲ್ಲ. ಪಂಚನಾಮೆಗೆ ಅಕ್ಕಪಕ್ಕದ ಮನೆಯವರನ್ನು ಪಂಚರಾಗಿ ಮಾಡಿರುವುದಿಲ್ಲ ಎಂದು ಸೂಚಿಸಿದಾಗ ಸಾಕ್ಷಿಯು ಬಿಳಿಕಳ್ಳಿಯವರನ್ನು ಪಂಚರಾಗಿ ಮಾಡಿದ್ದೇನೆ ಎಂದರು. ಅಕ್ಕಪಕ್ಕದವರನ್ನು ಪಂಚರಾಗಿ ಮಾಡಿದ್ದೀರ ಎಂದು ಕೇಳಿದಾಗ ಸಾಕ್ಷಿಯು ಸರಿಯಾದವರನ್ನು ಪಂಚರಾಗಿ ಮಾಡಿದ್ದೇನೆ ಎಂದು ನುಡಿದರು. ಪಂಚನಾಮೆಯನ್ನು ಬರೆದವರು ನನ್ನಿಂದ ಎಂದು ಎಲ್ಲಿಯೂ ಸಹಿ ಮಾಡಿರುವುದಿಲ್ಲ ಎಂದರೆ ಸರಿ. ಆದರೆ ಪಂಚನಾಮೆಯನ್ನು ನಮ್ಮ ಸಿಬ್ಬಂದಿಯಾದ ಪುಟ್ಟಮಾದಯ್ಯ ಅವರಿಂದ ಬರೆಸಲಾಗಿದೆ ಎಂದರು. ಅವರನ್ನು ಈ ಕೇಸಿನಲ್ಲಿ ಸಾಕ್ಷಿಯಾಗಿ ಮಾಡಿಲ್ಲ ಎಂದರೆ ಸರಿ. ಈ ಕೇಸು ದಾಖಲು ಮಾಡುವ ಸಮಯದಲ್ಲಿ ಆರೋಪಿತರು ಯಾವುದೇ ತಪ್ಪು ಮಾಡಿಲ್ಲ ಎಂದು ಕಂಡುಬಂದರೂ ಸಹ ಸುಳ್ಳು ಕೇಸನ್ನು ದಾಖಲು ಮಾಡಿದ್ದೀರಾ ಎಂದು ಸೂಚಿಸಿದಾಗ ಸಾಕ್ಷಿಯು ಸರಿಯಲ್ಲ ಎಂದು ನುಡಿದರು. ನೀವು ಸ್ಥಳಕ್ಕೆ ಬೇಟಿ ನೀಡಿ ಪಂಚನಾಮೆಯನ್ನು ಮಾಡಿರುವುದಿಲ್ಲ ಠಾಣೆಯಲ್ಲಿ ರೈಟರ್ ತಯಾರಿಸಿದ ಪಂಚನಾಮೆಗೆ ಠಾಣೆಯಲ್ಲಿಯೇ ಸಹಿ ಮಾಡಿರುತ್ತೀರ ಎಂದು ಸೂಚಿಸಿದಾಗ ಸಾಕ್ಷಿಯು ಸರಿಯಲ್ಲ ಎಂದು ನುಡಿದರು. ದೂರಿನಲ್ಲಿ ಕೊನೆಯ ಬಾರಿಗೆ ಯಾವತ್ತು ಎಲ್ಲಿ ಘಟನೆಯಾಯಿತು ಎಂದು ಹೇಳಿರುವುದಿಲ್ಲ ಎಂದು ಸೂಚಿಸಿದಾಗ ಸಾಕ್ಷಿಯು ದಿಃ 12-02-2014 ದೂರಿನಲ್ಲಿ ನಮೂದಾಗಿದೆ ನುಡಿದರು. ದಿಃ 12-02-2014 ರಂದು 1 ನೇ ಆರೋಪಿ ಆಸ್ಪತ್ರೆಯಲ್ಲಿ ದಾಖಲಾದ ದಿನಾಂಕ ಎಂದು ಸೂಚಿಸಿದಾಗ ಸಾಕ್ಷಿಯು ದಿಃ 15-01-2014 ರಂದು 1 ನೇ ಆರೋಪಿ ಕಿಮ್ಸ್ ಆಸ್ಪತ್ರೆಯಲ್ಲಿ ದಾಖಲಾಗಿರುವ ಬಗ್ಗೆ ದೂರಿನಲ್ಲಿ ಹೇಳಲಾಗಿದೆ ಎಂದು ನುಡಿದರು. ಚಾಸಾ-2 ರಿಂದ 8 ರವರು ನಿಮಗೆ ಯಾವುದೇ ಹೇಳಿಕೆಯನ್ನು ಕೊಟ್ಟಿಲ್ಲ ಹಾಗೂ ಚಾಸಾ-1

ರವರ ಮರುಹೇಳಿಕೆಯನ್ನು ಕೊಟ್ಟಿರುವುದಿಲ್ಲ ಅವುಗಳನ್ನು ಸೃಷ್ಟಿ ಮಾಡಿಕೊಂಡಿದ್ದೀರಾ ಎಂದು ಸೂಚಿಸಿದಾಗ ಸಾಕ್ಷಿ ಸರಿಯಲ್ಲ ನುಡಿದರು.

ಚಾಸಾ-1 ರವರು ನೀಡಿದ ಸುಳ್ಳು ದೂರನ್ನು ಸ್ವೀಕರಿಸಿ ಆರೋಪಿತರು ಯಾವುದೇ ಆರೋಪ ಮಾಡಿಲ್ಲ ಎಂದು ತನಿಖೆ ಸಮಯದಲ್ಲಿ ಕಂಡು ಬಂದರೂ ಸಹ ಸುಳ್ಳು ಆರೋಪ ಪಟ್ಟಿಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತೀರಾ ಎಂದು ಸೂಚಿಸಿದಾಗ ಸಾಕ್ಷಿಯು ಸರಿಯಲ್ಲ ನುಡಿದರು.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ)

ಓ. ಹೇ. ಕೇ. ಸ. ಇ. ಎ. ಒ.

6 ನೇ ಅ ಮು ಮ ದಂ ನ್ಯಾ